ಕ್ರ . ಸಂ	ಪದಗಳು	ಸಂಬಂಧಿತ ಪದಗಳು	ಸರಿಯಾದ ಹೊಂದಾಣಿಕೆ
1	ರಾಜ್ಯಪಾಲರು	ಪರೋಕ್ಷ ಚುನಾವಣೆ	
2	ಮುಖ್ಯಮಂತ್ರಿ	ನ್ಯಾಯ ನಿರ್ಣಯ	
3	ಸಚಿವರು	ಹಣಕಾಸು ಯೋಜನೆ	
4	ಬಜೆಟ್	ಜನರಿಂದ ನೇರವಾಗಿ ಆಯ್ಕೆಯಾಗುವರು	
5	ಶಾಸಕರು	ರಾಜ್ಯದ ಮುಖ್ಯಸ್ಥರು	
6	ನ್ಯಾಯಾಂಗ	ರಾಷ್ಟ್ರಪತಿಯಿಂದ ನೇಮಕ	
7	ವಿಧಾನ ಪರಿಷತ್	ಇಲಾಖೆಯ ನಿರ್ವಹಣೆ	

@KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–12
ಭಾರತದ ಭೌಗೋಳಿಕ ಪರಿಚಯ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಭಾರತದ ಭೌಗೋಳಿಕ ಲಕ್ಷಣಗಳನ್ನು ಅರಿತು, ಅವುಗಳನ್ನು ನಕ್ಷೆಯಲ್ಲಿ ಗುರುತಿಸುವರು.

ಚಟುವಟಿಕೆ 1: ನಿಮ್ಮೂರಿನ ಸುತ್ತಮುತ್ತಲು ಈ ಕೆಳಗಿನ ಅಂಶಗಳು ಕಂಡು ಬರುತ್ತವೆಯೋ? ಇಲ್ಲವೋ? ಎಂಬುದನ್ನು ಪರಿಕ್ಷೀಸಿ. ಹೌದು ಎಂದಾದರೆ ಹೌದು ಎಂದು, ಇಲ್ಲವೆಂದಾದರೆ ಇಲ್ಲವೆಂದು ಬರೆಯಿರಿ.


ಕಂಡುಬರುವ ಅಂಶಗಳು	ಹೌದು	ಇಲ್ಲ
ನದಿ		
ಬೆಟ್ಟ		
ಕೆರೆ		
ಬಾವಿ		
ಅರಣ್ಯ		
ಕಾಡು ಪ್ರಾಣಿಗಳು		

@KTBS NOT TO BE REPUBLISHED

ಚಟುವಟಿಕೆ 2: ತಪ್ಪಾದ ಹೊಂದಾಣಿಕೆಯನ್ನು ಸರಿಪಡಿಸಿ.

ಪ್ರಾಕೃತಿಕ ವಿಭಾಗ	ಲಕ್ಷಣ/ವೈಶಿಷ್ಟ್ಯತೆ	ಸರಿಯಾದ ಹೊಂದಾಣಿಕೆ
ಹಿಮಾಲಯ ಪರ್ವತಗಳು	ಪ್ರಮುಖ ಬಂದರುಗಳು	
ಗಂಗಾ ನದಿ ಬಯಲು ಪ್ರದೇಶ	ಕಡಿಮೆ ಮಳೆ, ಮರಳುಗಾಡು ಪ್ರದೇಶ	
ಪರ್ಯಾಯ ಪ್ರಸ್ಥಭೂಮಿ	ಅಂಡಮಾನ್–ನಿಕೋಬಾರ್ ಮತ್ತು ಲಕ್ಷ ದ್ವೀಪ	
ಥಾರ ಮರಭೂಮಿ	ಎತ್ತರವಾದ ಪರ್ವತಗಳು	
ದ್ವೀಪಗಳು	ಫಲವತ್ತಾದ ಭೂ ಪ್ರದೇಶ	
ಕರಾವಳಿ ಪ್ರದೇಶ	ಮಾಳ್ವ ಮತ್ತು ದಖನ್ ಪ್ರಸ್ಥಭೂಮಿ	

ಚಟುವಟಿಕೆ 3: ಕೊಟ್ಟಿರುವ ಭಾರತ ನಕ್ಷೆಯಲ್ಲಿ ಭಾರತದ ಪ್ರಾಕೃತಿಕ ವಿಭಾಗಗಳನ್ನು ಗುರುತಿಸಿ ಬಣ್ಣ ತುಂಬಿರಿ.



@KTBS
NOT TO BE REPUBLISHED


ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–13
ಕರ್ನಾಟಕದ ಭೌಗೋಳಿಕ ಪರಿಚಯ

B5B8S8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಕರ್ನಾಟಕದ ಭೌಗೋಳಿಕ ಲಕ್ಷಣಗಳನ್ನು ಅರಿತು, ಅವುಗಳನ್ನು ನಕ್ಷೆಯಲ್ಲಿ ಗುರುತಿಸುವರು.

ಚಟುವಟಿಕೆ 1: ಕೊಟ್ಟಿರುವ ಕರ್ನಾಟಕದ ನಕ್ಷೆಯಲ್ಲಿ ಪ್ರಾಕೃತಿಕ ವಿಭಾಗಗಳನ್ನು ಗುರುತಿಸಿ ಅವುಗಳಿಗೆ ಬಣ್ಣ ತುಂಬಿರಿ.



@KTBS NOT TO BE REPUBLISHED

ಚಟುವಟಿಕೆ 2 : ಕರ್ನಾಟಕದ ಭೌಗೋಳಿಕ ವಿಭಾಗಗಳ ಕುರಿತು ನೀಡಲಾಗಿರುವ ಹೇಳಿಕೆಗಳು ಸರಿ/ತಪ್ಪು ಎಂದು ಗುರುತಿಸಿ ಬರೆಯಿರಿ.

1. ಕರಾವಳಿಯಲ್ಲಿ ಮೀನುಗಾರಿಕೆ ಮುಖ್ಯ ಉದ್ಯಮವಾಗಿದೆ. ☐
2. ಕರಾವಳಿ ಪ್ರದೇಶವು ಸಮುದ್ರಕ್ಕೆ ಹತ್ತಿರವಿದೆ. ☐
3. ಕೃಷ್ಣಾ ಮತ್ತು ಭೀಮಾ ನದಿಗಳು ಉತ್ತರ ಮೈದಾನದಲ್ಲಿ ಹರಿಯುತ್ತವೆ. ☐
4. ಮಲೆನಾಡು ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ☐
5. ದಕ್ಷಿಣ ಮೈದಾನ ಪ್ರದೇಶವು ಬೆಟ್ಟಗಳಿಂದ ಕೂಡಿದೆ. ☐
6. ಬೆಳಗಾವಿ, ತುಮಕೂರು ಮತ್ತು ಮೈಸೂರು ಕರಾವಳಿ ಜಿಲ್ಲೆಗಳಾಗಿವೆ. ☐

ಚಟುವಟಿಕೆ 3: ನಿಮ್ಮ ಊರು ಕರ್ನಾಟಕದ ಯಾವ ಭೌಗೋಳಿಕ ವಿಭಾಗದಲ್ಲಿ ಬರುತ್ತದೆ? ಆ ವಿಭಾಗದ ವೈಶಿಷ್ಟತೆಗಳನ್ನು ಬರೆಯಿರಿ.

@KTBS NOT TO BE REPUBLISHED


ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–14
ಖಂಡಗಳ ಪರಿಚಯ

N1X3H4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಪ್ರಪಂಚದ ನಕಾಶೆಯಲ್ಲಿ ಸಮತಟ್ಟಾದ ಮೇಲ್ಮೈ ಮೇಲೆ ದಿಕ್ಕುಗಳು, ಖಂಡಗಳು ಮತ್ತು ಸಾಗರಗಳನ್ನು ಗುರುತಿಸುವರು.

ಚಟುವಟಿಕೆ 1: ಕೆಳಗೆ ನೀಡಿರುವ ಪ್ರಪಂಚದ ಭೂಪಟದಲ್ಲಿ ಸಾಗರಗಳು ಮತ್ತು ಖಂಡಗಳನ್ನು ಗುರುತಿಸಿರಿ.



@KTBS NOT TO BE REPUBLISHED

ನೀವು ಗುರುತಿಸಿರುವ ಖಂಡಗಳು ಹಾಗೂ ಸಾಗರಗಳನ್ನು ಅವುಗಳ ಗಾತ್ರಗಳಿಗನುಗುಣವಾಗಿ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

ಖಂಡಗಳು	ಸಾಗರಗಳು

ಈ ಮೇಲಿನ ಪಟ್ಟಿಯಲ್ಲಿ ಗಮನಿಸಿರುವಂತೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ವಿಶ್ವದ ಅತ್ಯಂತ ದೊಡ್ಡ ಖಂಡ ಯಾವುದು?

_____

2. ವಿಶ್ವದ ಅತ್ಯಂತ ಚಿಕ್ಕ ಖಂಡ ಯಾವುದು?

_____

3. ಅತ್ಯಂತ ವಿಶಾಲವಾದ ಸಾಗರ ಯಾವುದು?

_____

4. ಅತ್ಯಂತ ಚಿಕ್ಕ ಸಾಗರ ಯಾವುದು?


_____

ಚಟುವಟಿಕೆ 2 : ಒಬ್ಬ ವಿದ್ಯಾರ್ಥಿಯು ಕೇಂದ್ರ ಸ್ಥಾನದಿಂದ ಸೂರ್ಯನ ಕಡೆಗೆ ಮುಖ ಮಾಡಿ 2ಕಿ.ಮೀ. ನಡೆಯುತ್ತಾನೆ. ನಂತರ ಎಡಕ್ಕೆ ಮುಖ ಮಾಡಿ 5ಕಿ.ಮೀ. ನಡೆದು ಮತ್ತೆ ಎಡಕ್ಕೆ ತಿರುಗಿ 2ಕಿ.ಮೀ. ನಡೆಯುತ್ತಾನೆ. ಹಾಗಾದರೆ ಆತನು ಕೇಂದ್ರ ಸ್ಥಾನದಿಂದ ಯಾವ ದಿಕ್ಕಿನಲ್ಲಿದ್ದಾನೆ? ಎಂಬುದನ್ನು ಕಂಡು ಹಿಡಿಯಿರಿ.



© KTBS NOT TO BE REPUBLISHED

ಚಟುವಟಿಕೆ 3: ಈ ಕೆಳಗೆ ಚಿತ್ರ ಹಾಗೂ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳನ್ನು ಓದಿ ಅರ್ಥೈಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.



ಹೇಳಿಕೆಗಳು :–

1. ಉಷ್ಣವಲಯದಲ್ಲಿ ಹೆಚ್ಚು ತಾಪಮಾನವನ್ನು ಕಾಣುತ್ತೇವೆ.
2. ಶೀತವಲಯವು ಜನವಸತಿಗೆ ಯೋಗ್ಯವಾಗಿರುವುದಿಲ್ಲ.
3. ಸಮಶೀತೋಷ್ಣ ವಲಯವು ಜನವಸತಿಗೆ ಹೆಚ್ಚು ಯೋಗ್ಯವಾಗಿರುತ್ತದೆ.
4. ಪರ್ವತ ಪ್ರದೇಶಗಳು ಹೆಚ್ಚು ಮಳೆ ಪಡೆಯುತ್ತವೆ.

ಈ ಕೆಳಗಿನ ಪ್ರಶ್ನೆಗಳಿಗೆ ಹೌದು/ ಇಲ್ಲ ಉತ್ತರಿಸಿರಿ.

ಹೇಳಿಕೆಗಳು.	ಹೌದು/ಇಲ್ಲ
1. ಅಂಟಾರ್ಕ್ಟಿಕಾ ಖಂಡವು ಜನವಸತಿಗೆ ಯೋಗ್ಯವಾಗಿರುವುದಿಲ್ಲ.	
2. ಏಷ್ಯಾ ಖಂಡವು ಹೆಚ್ಚು ಜನಸಂಖ್ಯೆಯಿಂದ ಕೂಡಿದೆ.	
3. ಮರುಭೂಮಿ ಪ್ರದೇಶ ಹೆಚ್ಚು ಮಳೆ ಪಡೆಯುತ್ತದೆ.	

©KTBS NOT TO BE REPUBLISHED

ಚಟುವಟಿಕೆ 4 : ಕೆಳಗೆ ಕೊಟ್ಟಿರುವ ಭೂಖಂಡಗಳು ಯಾವ ವಲಯದಲ್ಲಿ ಬರುತ್ತವೆ ಎಂದು (✓) ಸಂಕೇತದ ಮೂಲಕ ಗುರುತಿಸಿರಿ.

ಕ್ರ.ಸಂ	ಖಂಡಗಳ ಹೆಸರು	ಉಷ್ಣ ವಲಯ	ಸಮಶೀತೋಷ್ಣ ವಲಯ	ಶೀತ ವಲಯ
1	ಏಷ್ಯಾ			
2	ಆಫ್ರಿಕಾ			
3	ಉತ್ತರ ಅಮೇರಿಕಾ			
4	ದಕ್ಷಿಣ ಅಮೇರಿಕ			
5	ಯೂರೋಪ್			
6	ಅಂಟಾರ್ಕ್ಟಿಕ			
7	ಆಸ್ಟ್ರೇಲಿಯಾ			

ಚಟುವಟಿಕೆ 5: ಶಾಲೆಯಲ್ಲಿ ಲಭ್ಯವಿರುವ ಗ್ಲೋಬ್ ನ ಸಹಾಯದಿಂದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಗ್ಲೋಬ್ ನ ಬಹುಭಾಗ ಯಾವ ಬಣ್ಣದಿಂದ ಕೂಡಿದೆ? ಅದು ಏನನ್ನು ಸೂಚಿಸುತ್ತದೆ?

2. ಗ್ಲೋಬ್ ಯಾವ ಭಾಗಕ್ಕೆ ವಾಲುವಿಕೆಯನ್ನು ಹೊಂದಿದೆ?

3. "ಗ್ಲೋಬ್ ಭೂಮಿಯನ್ನು ಪ್ರತಿನಿಧಿಸುತ್ತಿದ್ದು, ತನ್ನ ಎಡ ಭಾಗಕ್ಕೆ ತಿರುಗುತ್ತದೆ. ಇದನ್ನು ಪರಿಭ್ರಮಣೆ ಎನ್ನುತ್ತೇವೆ". ಈ ಹೇಳಿಕೆಯನ್ನು ಆದರಿಸಿ ಕೆಳಗಿನ ಪ್ರಶ್ನೆಗೆ ಉತ್ತರಿಸಿರಿ.

   ಎ. ಹಗಲು –ರಾತ್ರಿ ಉಂಟಾಗಲು ಕಾರಣಗಳೇನು?

©KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–15

ಜಗತ್ತಿನ ವೈಪರೀತ್ಯಗಳು

L8P2R2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಭೂ ಪ್ರದೇಶ, ಹವಾಮಾನ ಸಂಪನ್ಮೂಲಗಳು (ಆಹಾರ, ನೀರು, ವಸತಿ, ಜೀವನೋಪಾಯ) ಮತ್ತು ಸಾಂಸ್ಕೃತಿಕ ಜೀವನದ ನಡುವೆ ಸಂಪರ್ಕವನ್ನು ಸ್ಥಾಪಿಸುವರು. (ಉದಾಹರಣೆ ಉಷ್ಣ ಹಾಗೂ ಶೀತ ಮರುಭೂಮಿಗಳಂತಹ ದೂರದ/ ಕಷ್ಟದ ಪ್ರದೇಶಗಳಲ್ಲಿ ಜೀವನ)

ಚಟುವಟಿಕೆ 1: ಭೂಮಿಯ ಮೇಲೆ ವಾಸಿಸುತ್ತಿರುವ ಎಲ್ಲಾ ಪ್ರದೇಶಗಳ ಜನರು ವಿಭಿನ್ನ ಶೈಲಿಯ ಉಡುಗೆ–ತೊಡುಗೆಗಳನ್ನು ಹೊಂದಿರುತ್ತಾರೆ. ಕಾರಣ ಆ ಪ್ರದೇಶಗಳ ಹವಾಮಾನ, ಸಾಂಸ್ಕೃತಿಕ ಜೀವನ, ಮತ್ತು ಆಚರಣೆಗಳು ಭಿನ್ನವಾಗಿರುತ್ತವೆ. ಈ ಕೆಳಗೆ ಕೆಲವು ಉಡುಪುಗಳ ವಿಧಗಳು ಹಾಗೂ ಅವುಗಳ ವಿಶೇಷತೆಯನ್ನು ನೀಡಲಾಗಿದೆ. ಗಮನಿಸಿರಿ.

ಉಡುಪುಗಳ ವಿಧಗಳು	ಉಡುಪುಗಳ ವಿಶೇಷತೆ
ಹತ್ತಿ ಬಟ್ಟೆ	ಸೂರ್ಯನ ಕಿರಣಗಳನ್ನು ಪ್ರತಿಫಲಿಸುವುದರಿಂದ ಕಡಿಮೆ ಶಾಖವನ್ನು ಹೀರಿಕೊಳ್ಳುತ್ತದೆ.
ಉಣ್ಣೆಯ ಬಟ್ಟೆ	ದೇಹವನ್ನು ಶೀತ ಗಾಳಿಯಿಂದ ರಕ್ಷಿಸಿ ಬೆಚ್ಚನೆಯ ಅನುಭವವನ್ನು ನೀಡುತ್ತದೆ.
Poly Vinyl Chloride (PVC) ಯಿಂದ ತಯಾರಿಸಿದ ಬಟ್ಟೆ	ಮಳೆಯ ನೀರಿನಿಂದ ರಕ್ಷಿಸುತ್ತದೆ.

© KSEEB NOT TO BE REPUBLISHED

ಮೇಲೆ ನೀಡಿರುವ ಸುಳುಹುಗಳ ಸಹಾಯದಿಂದ ಈ ಕೆಳಗೆ ನೀಡಿರುವ ಪ್ರದೇಶಗಳ ಜನರು ಯಾವ ರೀತಿಯ ಉಡುಪು ಧರಿಸುತ್ತಾರೆಂಬುದನ್ನು ಬರೆಯಿರಿ.

ಕ್ರ.ಸಂ	ಪ್ರದೇಶಗಳು	ಧರಿಸುವ ಉಡುಪಿನ ವಿಧ
1	ಅತಿ ಹೆಚ್ಚು ಉಷ್ಣತೆಯಿಂದ ಕೂಡಿದ ಅರೇಬಿಯಾ	
2	ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಾದ ಭಾರತದ ಈಶಾನ್ಯ ರಾಜ್ಯಗಳು	
3	ಅತಿ ಹೆಚ್ಚು ಶೀತದಿಂದ ಕೂಡಿದ ಸೈಬೇರಿಯನ್ ಪ್ರದೇಶ	
4	ಅತಿ ಹೆಚ್ಚು ಬಿಸಿಲು ಬೀಳುವ ಉತ್ತರ ಆಫ್ರಿಕಾ ಪ್ರದೇಶಗಳು	

ಚಟುವಟಿಕೆ 2: ಭಾರತವು ಹಳ್ಳಿಗಳಿಂದ ಕೂಡಿದ ದೇಶವಾಗಿದ್ದು, ಹಳ್ಳಿಯ ಜನರ ಜೀವನ ಶೈಲಿ, ದಿನಚರಿಗಳು ನಗರದ ಜನರ ಜೀವನ ಶೈಲಿಗಿಂತ ಹೇಗೆ ಭಿನ್ನವಾಗಿರುತ್ತವೆ? ಎಂಬುದನ್ನು ಸ್ನೇಹಿತರೊಂದಿಗೆ ಚರ್ಚಿಸಿ ಕೊಟ್ಟಿರುವ ಖಾಲಿ ಜಾಗದಲ್ಲಿ ಬರೆಯಿರಿ.

ಉದಾಹರಣೆ : ದಿನಚರಿ, ಉದ್ಯೋಗ, ಆಹಾರ, ಉಡುಪು, ಆಟೋಟಗಳು, ಹಬ್ಬಗಳು ಇತ್ಯಾದಿ.

ನಗರ ಜೀವನ ಶೈಲಿ	
ಹಳ್ಳಿಯ ಜೀವನ ಶೈಲಿ	

@KTBS NOT TO BE REPUBLISHED

ಚಟುವಟಿಕೆ 3: ನಿಮ್ಮ ಮನೆಯಲ್ಲಿ ತಯಾರಿಸುವ ವಿವಿಧ ಅಡುಗೆಗಳನ್ನು ಹೆಸರಿಸಿ, ತರಗತಿಯಲ್ಲಿ ಮಂಡಿಸಿ, ವಿಶೇಷತೆಗಳನ್ನು ಬರೆಯಿರಿ.

ಚಟುವಟಿಕೆ 4: ನಿಮ್ಮದಿಯ ಜೀವನ ನಡೆಸಲು ಬೇಕಾದ ಕೆಲವು ಮೂಲಭೂತ ಅವಶ್ಯಕತೆಗಳನ್ನು ತಿಳಿಸಿರಿ.

ಚಟುವಟಿಕೆ 5 : ಭಾರತ ದೇಶವು ಭೌಗೋಳಿಕ ವೈವಿಧ್ಯತೆಯಿಂದ ಕೂಡಿದೆ. ನೀವು ಯಾವ ಭೌಗೋಳಿಕ ಹಿನ್ನೆಲೆ ಇರುವ ಪ್ರದೇಶದಲ್ಲಿ ವಾಸಿಸಲು ಇಚ್ಛಿಸುತ್ತೀರಿ? ಏಕೆ? ಈ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

ಕ್ರ.ಸಂ.	ಭೌಗೋಳಿಕ ಪ್ರದೇಶಗಳು	ಹೌದು/ಇಲ್ಲ	ಕಾರಣ
01	ಅರಣ್ಯ ಪ್ರದೇಶ		
02	ಮರುಭೂಮಿ		
03	ಸಮುದ್ರ ತೀರ ಪ್ರದೇಶ		
04	ನದಿ ಬಯಲು		
05	ಗುಡ್ಡಗಾಡು ಪ್ರದೇಶ		

@KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–16
ಸಮಾಜ ಸುಧಾರಕರು

P7U9X1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ವಿವಿಧ ರೀತಿಯ ತಾರತಮ್ಯಗಳನ್ನು ಗುರುತಿಸುವರು ಮತ್ತು ತಾರತಮ್ಯದ ಮೂಲಗಳನ್ನು ತಿಳಿದುಕೊಳ್ಳುವರು.

ಚಟುವಟಿಕೆ 1 : ಕೆಳಗೆ ನೀಡಿರುವ ಪದ್ಯವನ್ನು ಕುರಿತು ರಾಗಬದ್ಧವಾಗಿ ಹಾಡಿರಿ /ಸ್ವರ ಭಾವದೊಂದಿಗೆ ವಾಚನ ಮಾಡಿರಿ ಹಾಗೂ ಭಾವಾರ್ಥವನ್ನು ಬರೆಯಿರಿ.

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲವೋ
ಗುಟ್ಟುಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ
ಜಲವೆ ಸಕಲ ಕುಲಕ್ಕೆ ತಾಯಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯನರಿತು ನೀ ಹರಿಯ ನೆನೆ ಮನುಜ
ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನಾನೆಲೆಯಾದಿಕೇಶವರಾಯನ
ಚರಣಕಮಲವನು ಕೀರ್ತಿಸುವನೆ ಕುಲಜ

@KTBS NOT TO BE REPUBLISHED

ಚಟುವಟಿಕೆ 2: ನಿಮ್ಮೂರಿನಲ್ಲಿ ಆಚರಿಸುವ ಯಾವುದಾದರೂ ಒಂದು ಹಬ್ಬದ ವಿಶೇಷತೆಯನ್ನು ಬರೆಯಿರಿ.

ಚಟುವಟಿಕೆ 3: ಈ ಕೆಳಗಿನ ಪಠ್ಯವನ್ನು ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಮಹಾತ್ಮ ಜ್ಯೋತಿಬಾ ಪುಲೆಯವರು 11ನೇ ಏಪ್ರಿಲ್ 1827 ರಂದು ಬಾಂಬೆ ಪ್ರೆಸಿಡೆನ್ಸಿ (ಮಹಾರಾಷ್ಟ್ರ)ಯಲ್ಲಿ ಜನಿಸಿದರು. ಮಹಾರಾಷ್ಟ್ರದ ಕೆಳವರ್ಗದವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಅಸ್ಪೃಶ್ಯರು, ಅನಾಥರು ಮತ್ತು ವಿಧವೆಯರಿಗಾಗಿ ಶಾಲೆ ತೆರೆದರು. ಸಾ.ಶ. 1863 ರಲ್ಲಿ ಪುನರ್ವಸತಿ ಕೇಂದ್ರವನ್ನು ತೆರೆಯುವ ಮೂಲಕ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸುವ ಪ್ರಯತ್ನ ಮಾಡಿದರು. ವಿಧವಾ ವಿವಾಹವನ್ನು ಉತ್ತೇಜಿಸಿದರು. ಇವರು 'ಗುಲಾಮಗಿರಿ' ಎಂಬ ಕೃತಿಯನ್ನು ರಚಿಸಿ, ತಮ್ಮ ಚಿಂತನೆಗಳನ್ನು ಸಂವಾದದ ರೂಪದಲ್ಲಿ ವಿವರಿಸಿದರು.

1. ಮಹಾತ್ಮ ಜ್ಯೋತಿಬಾ ಪುಲೆಯವರು ಎಲ್ಲಿ ಜನಿಸಿದರು?

2. ಸತ್ಯ ಶೋಧಕ ಸಮಾಜವನ್ನು ಪುಲೆಯವರು ಯಾವ ಉದ್ದೇಶಕ್ಕಾಗಿ ಸ್ಥಾಪಿಸಿದರು?

3. ಜ್ಯೋತಿಬಾ ಪುಲೆಯವರು ರಚಿಸಿದ ಕೃತಿಯನ್ನು ಹೆಸರಿಸಿ.


4. ಪುಲೆಯವರು ಪುನರ್ವಸತಿ ಕೇಂದ್ರಗಳನ್ನು ತೆರೆಯುವ ಮೂಲಕ ಯಾವ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದರು?

© KSEEB NOT TO BE REPUBLISHED

ಚಟುವಟಿಕೆ 4: ಕೆಳಗೆ ನೀಡಿರುವ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರೊಂದಿಗೆ ಚರ್ಚಿಸಿ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

ಬಾಲ್ಯವಿವಾಹ	ಲಿಂಗತಾರತಮ್ಯ

ಚಟುವಟಿಕೆ 5 : ಈ ಕೆಳಗಿನ ಚಿತ್ರದಲ್ಲಿ ನೀಡಿರುವ ಸಮಾಜ ಸುಧಾರಕರು ಗುರುತಿಸಿದ ಪ್ರಮುಖ ಸಮಸ್ಯೆಗಳನ್ನು ಹಾಗೂ ಸೂಚಿಸಿದ ಪರಿಹಾರಗಳನ್ನು ಬರೆಯಿರಿ.

ಸಮಾಜ ಸುಧಾರಕರು	ಗುರುತಿಸಿದ ಸಮಸ್ಯೆ	ಸೂಚಿಸಿದ ಪರಿಹಾರಗಳು
		
		

@KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–17

ಮೊದಲ ಸ್ವಾತಂತ್ರ್ಯ ಸಮರ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


ಕಲಿಕಾ ಫಲ: ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳನ್ನು ತಿಳಿದು, ಪ್ರಮುಖ ನಾಯಕರ ಹೋರಾಟದ ಬಗೆಯನ್ನು ಪ್ರಶಂಸಿಸುವರು.

ಚಟುವಟಿಕೆ 1: ಕೆಳಗಿನ ಚಿತ್ರದಲ್ಲಿರುವ ವ್ಯಕ್ತಿಯನ್ನು ಗುರುತಿಸಿ, ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಾಡಿದ ಕಾರ್ಯವನ್ನು ಬರೆಯಿರಿ.



© KTBS NOT TO BE REPUBLISHED

ಚಟುವಟಿಕೆ 2 : ಈ ಕೆಳಗಿನ ಮನೋನಕ್ಷೆಯಲ್ಲಿ ನೀಡಿರುವ ಸುಳುಹು ಅನುಸರಿಸಿ ಚಟವಟಿಕೆಯನ್ನು ಪೂರ್ಣಗೊಳಿಸಿರಿ.



ಚಟುವಟಿಕೆ 3: ಝಾನ್ಸಿರಾಣಿ ಲಕ್ಷ್ಮೀಬಾಯಿಯ ಚಲನಚಿತ್ರವನ್ನು ವೀಕ್ಷಿಸಿ, ಅವರ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

ಚಟುವಟಿಕೆ 4: 1857ರ ಭಾರತದ ಪ್ರಥಮ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಕಾರಣವಾದ ಅಂಶಗಳನ್ನು ಕೆಳಗೆ ನೀಡಿರುವ ಸ್ಥಳದಲ್ಲಿ ಬರೆಯಿರಿ.

ರಾಜಕೀಯ ಕಾರಣಗಳು	
ಆಡಳಿತಾತ್ಮಕ ಕಾರಣಗಳು	
ಆರ್ಥಿಕ ಕಾರಣಗಳು	
ಸಾಮಾಜಿಕ ಹಾಗೂ ಧಾರ್ಮಿಕ ಕಾರಣಗಳು	
ಸೈನಿಕ ಕಾರಣಗಳು	
ತತ್‌ಕ್ಷಣದ ಕಾರಣಗಳು	

@KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–18

ಗಾಂಧಿಯುಗ

E9P4X5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಗಾಂಧೀಜಿಯವರ ಆರಂಭಿಕ ಜೀವನ ಹಾಗೂ ಅವರು ಪ್ರಯೋಗಿಸಿದ ಅಹಿಂಸಾ ಮತ್ತು ಸತ್ಯಾಗ್ರಹ ನೀತಿಯನ್ನು ಮೆಚ್ಚುತ್ತಾ ಅವರ ಬಗ್ಗೆ ಹೆಮ್ಮೆಪಡುವರು.


ಚಟುವಟಿಕೆ 1 : ಕೆಳಗೆ ನೀಡಿರುವ ಪಟ್ಟಿಯಲ್ಲಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರ ಮಾಹಿತಿಯನ್ನು ಸಂಗ್ರಹಿಸಿ, ಸಂಭಾಷಣೆಯನ್ನು ರಚಿಸಿ ಅಭಿನಯಿಸಿರಿ.

ಭಗತ್ ಸಿಂಗ್, ಮಹಾತ್ಮ ಗಾಂಧಿ, ರಾಣಿ ಅಬ್ಬಕ್ಕದೇವಿ, ವಿ ಡಿ ಸಾರ್ವಕರ್, ಚಂದ್ರಶೇಖರ ಆಜಾದ್

ಸೂಚನೆ : ಏಕ/ದ್ವಿ/ಬಹುಪಾತ್ರಗಳಿರಲಿ, ಕನಿಷ್ಟ 5 ಸಂಭಾಷಣೆಗಳಿರಲಿ, ಸಂಭಾಷಣೆ ರಚಿಸಿದ ನಂತರ ಪಾತ್ರಾಭಿನಯ ಮಾಡಿರಿ.

@KTBS NOT TO BE REPUBLISHED

ಚಟುವಟಿಕೆ 2: **"ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ"** ಹಾಗೂ **"ಮಾಡು ಇಲ್ಲವೇ ಮಡಿ"** ಹೀಗೆ ಗಾಂಧೀಜಿಯವರು ಕರೆ ನೀಡಲು ಕಾರಣವೇನು? ಗುಂಪಿನಲ್ಲಿ ಚರ್ಚಿಸಿ ನಿಮ್ಮದೇ ಮಾತುಗಳಲ್ಲಿ ಬರೆಯಿರಿ.





@KTBS NOT TO BE REPUBLISHED

ಚಟುವಟಿಕೆ 3: ಮಂದಗಾಮಿ ಮತ್ತು ತೀವ್ರಗಾಮಿಗಳು ಇವರಿಬ್ಬರ ಉದ್ದೇಶ ಸ್ವಾತಂತ್ರ್ಯ ಪಡೆಯುವುದೇ ಆಗಿತ್ತು ಹಾಗಿದ್ದರೂ ಇಬ್ಬರೂ ಬೇರೆ ಬೇರೆ ರೀತಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದೇಕೆ? ಯೋಚಿಸಿ ತರಗತಿಯಲ್ಲಿ ಸ್ನೇಹಿತರೊಂದಿಗೆ ಚರ್ಚಿಸಿರಿ. ಪ್ರಮುಖಾಂಶಗಳನ್ನು ಈ ಕೆಳಗೆ ಬರೆಯಿರಿ.

ಚಟುವಟಿಕೆ 4: ನಿಮ್ಮ ಶಾಲಾ ಗ್ರಂಥಾಲಯದಲ್ಲಿರುವ ಪುಸ್ತಕಗಳ ಸಹಾಯದೊಂದಿಗೆ ಭಗತ್‌ಸಿಂಗ್, ಸುಭಾಷ್ ಚಂದ್ರ ಬೋಸ್‌ರ ಕಿರುಭಾಷಣ ರಚಿಸಿ ತರಗತಿಯಲ್ಲಿ ಮಂಡಿಸಿರಿ.

1. ಭಗತ್ ಸಿಂಗ್

2. ಸುಭಾಷ್ ಚಂದ್ರ ಬೋಸ್

@KTBS NOT TO BE REPUBLISHED

ಚಟುವಟಿಕೆ 5: ಈ ಕೆಳಗಿನ ಪ್ರಸಿದ್ಧ ಮಹಿಳಾ ಸಾಧಕಿಯರಿಗೆ ಸಂಬಂಧಿಸಿದ ಸಂಕ್ಷಿಪ್ತ ಮಾಹಿತಿಯನ್ನು ಬರೆದು, ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.

1. ರಾಣಿ ಅಬ್ಬಕ್ಕದೇವಿ

2. ಬಳ್ಳಾರಿ ಸಿದ್ದಮ್ಮ

3. ಯಶೋಧರಮ್ಮ ದಾಸಪ್ಪ

4. ಉಮಾಬಾಯಿ ಕುಂದಾಪುರ

5. ಕಮಲಾದೇವಿ ಚಟ್ಟೋಪಾಧ್ಯಾಯ

@KTBS
NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–19

ಭಾರತದ ಸ್ವಾತಂತ್ರ್ಯ ಹೋರಾಟ

S5F6T4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಮಂದಗಾಮಿಗಳು, ತೀವ್ರಗಾಮಿಗಳು ಮತ್ತು ಕ್ರಾಂತಿಕಾರಿಗಳ ತಾತ್ವಿಕ ನಿಲುವು ನೀತಿಗಳನ್ನು ಅರ್ಥೈಸಿಕೊಂಡು ಭಿನ್ನತೆಗಳನ್ನು ಗುರುತಿಸುವರು.

ಚಟುವಟಿಕೆ 1: 'ಸಂಗೊಳ್ಳಿ ರಾಯಣ್ಣ' ಚಲನಚಿತ್ರವನ್ನು ವೀಕ್ಷಿಸಿ, ಅವರ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ವಿವರವಾಗಿ ಬರೆಯಿರಿ.

ಚಟುವಟಿಕೆ 2: ಈ ಕೆಳಗಿನ ಅಂಕಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ಘೋಷಣೆಗಳನ್ನು ಬರೆಯಿರಿ.


ಸ್ವಾತಂತ್ರ್ಯ ಹೋರಾಟಗಾರರು	ಘೋಷಣೆಗಳು
1. 2. 3. 4. 5.	

@KTBS NOT TO BE REPUBLISHED

ಚಟುವಟಿಕೆ 3: ಈ ಕೆಳಗೆ ಹೆಸರಿಸಿದ ಸ್ವಾತಂತ್ರ್ಯ ಹೋರಾಟಗಾರರನ್ನು ಮಂದಗಾಮಿ ಹಾಗೂ ತೀವ್ರಗಾಮಿ ಹೋರಾಟಗಾರರು ಯಾರೆಂದು ವಿಂಗಡಿಸಿರಿ. ಚಂದ್ರಶೇಖರ್ ಆಜಾದ್, ಖುದಿರಾಮ್ ಬೋಸ್, ಲಾಲ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ದಾದಾಬಾಯಿ ನವರೋಜಿ, ಗೋಪಾಲ ಕೃಷ್ಣ ಗೋಖಲೆ, ಬಿಪಿನ್ ಚಂದ್ರ ಪಾಲ್.

ಮಂದಗಾಮಿಗಳು	ತೀವ್ರಗಾಮಿಗಳು

ಚಟುವಟಿಕೆ 4 : ಕೆಳಗಿನ ಚಿತ್ರಗಳನ್ನು ವೀಕ್ಷಿಸಿ, ಆ ದೃಶ್ಯ ಯಾವುದೆಂದು ಹೆಸರಿಸಿರಿ.

ಚಿತ್ರಗಳು	ಹೆಸರು
	
	
	

© KSTBB NOT TO BE REPUBLISHED


ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–20
ಏಕೀಕರಣ ಪೂರ್ವ ಕರ್ನಾಟಕ

C8Z4G8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಭಾರತದ ಭೂಪಟದಲ್ಲಿ ಪ್ರಮುಖ ಐತಿಹಾಸಿಕ ನೆಲೆಗಳು ಹಾಗೂ ಸ್ಥಳಗಳನ್ನು ಗುರುತಿಸುವರು.

ಚಟುವಟಿಕೆ 1: ಕೆಳಗೆ ನೀಡಿರುವ ಭಾರತದ ಭೂಪಟದಲ್ಲಿರುವ ಕರ್ನಾಟಕದ ಏಕೀಕರಣದ ಪೂರ್ವದಲ್ಲಿದ್ದ ಪ್ರಾಂತ್ಯಗಳನ್ನು ಗುರುತಿಸಿರಿ. (ಮುಂಬೈ ಪ್ರಾಂತ್ಯ, ಹೈದರಾಬಾದ್ ಪ್ರಾಂತ್ಯ, ಮೈಸೂರು ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ)



@KTBS NOT TO BE REPUBLISHED

ಪ್ರತಿಯೊಂದು ಪ್ರಾಂತ್ಯಕ್ಕೆ ಸಂಬಂಧಿಸಿದ ಜಿಲ್ಲೆಗಳನ್ನು ಪಟ್ಟಿ ಮಾಡಿರಿ.

ಕ್ರ.ಸಂ.	ಮುಂಬೈ ಪ್ರಾಂತ್ಯ	ಹೈದರಾಬಾದ್ ಪ್ರಾಂತ್ಯ	ಮದ್ರಾಸ್ ಪ್ರಾಂತ್ಯ	ಮೈಸೂರು ಪ್ರಾಂತ್ಯ

ಚಟುವಟಿಕೆ 2: ಈ ಕೆಳಗೆ ನೀಡಿರುವ ಭಾರತದ ಚುಕ್ಕೆ ನಕ್ಷೆಯನ್ನು ಪೂರ್ಣಗೊಳಿಸಿ, ನೀಡಿರುವ ರಾಜವಂಶಗಳ ಪ್ರಮುಖ ರಾಜಧಾನಿಗಳನ್ನು ಗುರುತಿಸಿರಿ.



@KTBS NOT TO BE REPUBLISHED

ಕ್ರ.ಸಂ	ರಾಜ ಮನೆತನಗಳು	ರಾಜಧಾನಿ
1	ಮರಾಠರು	
2	ಕೊಡಗಿನ ಅರಸರು	
3	ನಿಜಾಮರು	
4	ಬ್ರಿಟಿಷ್ ಮದ್ರಾಸ್ ಸರ್ಕಾರ	
5	ಮೈಸೂರು ಅರಸರು	

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–21
ಸಾಮಾಜಿಕ ಹೋರಾಟಗಳು

S4R6C3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ವೀಕ್ಷಿಸಿದ/ಅನುಭವಿಸಿದ ಸಮಸ್ಯೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು ಮತ್ತು ಸಮಾಜದ ದೊಡ್ಡ ಸಮಸ್ಯೆಗಳಿಗೆ ಆಚರಣೆಗಳು/ಘಟನೆಗಳನ್ನು ಸಂಬಂಧಿಕರಿಸುವರು.


ಉದಾ: ಸಂಪನ್ಮೂಲಗಳನ್ನು ಪಡೆಯುವ/ಸ್ವಾಮ್ಯಕ್ಕಾಗಿ ತಾರತಮ್ಯ, ವಲಸೆ/ಸ್ಥಳಾಂತರ, ಹೊರಗಿಡುವಿಕೆ, ಮಕ್ಕಳ ಹಕ್ಕುಗಳು.

ಚಟುವಟಿಕೆ 1: ಈ ಕೆಳಗಿನ ಮರದ ಚಿತ್ರ ಗಮನಿಸಿ, ಇದರ ಉಪಯೋಗಗಳನ್ನು ಪಟ್ಟಿ ಮಾಡಿರಿ.



©KTBS NOT TO BE REPUBLISHED

ಚಟುವಟಿಕೆ 2: ಕೆಳಗಿನ ಚಿತ್ರಗಳಿಗೆ ಶೀರ್ಷಿಕೆಯನ್ನು ನೀಡಿ ಅದಕ್ಕೆ ಒಂದೊಂದು ಪರಿಹಾರವನ್ನು ಬರೆಯಿರಿ.

	
ಶೀರ್ಷಿಕೆ :	ಶೀರ್ಷಿಕೆ :
ಪರಿಹಾರ :	ಪರಿಹಾರ :
	
ಶೀರ್ಷಿಕೆ :	ಶೀರ್ಷಿಕೆ :
ಪರಿಹಾರ :	ಪರಿಹಾರ :

@KTBS
BE REPUBLISHED

ಚಟುವಟಿಕೆ 3: ನಿಮ್ಮ ಮನೆಯ ಸುತ್ತ–ಮುತ್ತಲಿನ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪಟ್ಟಿ ಮಾಡಿ, ಅವುಗಳ ಪರಿಹಾರಕ್ಕಾಗಿ ಕೈಗೊಳ್ಳಬಹುದಾದ ಕ್ರಮಗಳನ್ನು ಬರೆಯಿರಿ.

ಸಮಸ್ಯೆಗಳು	ಪರಿಹಾರಗಳು

©KTBS NOT TO BE REPUBLISHED

ಚಟುವಟಿಕೆ 4: ಕನ್ನಡದ ಭಾಷಾಭಿಮಾನ ಮೂಡಿಸುವಂತಹ ಯಾವುದಾದರೊಂದು ಗೀತೆಯನ್ನು ಬರೆಯಿರಿ.

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–22
ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳು

G2X5N7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಪ್ರಮುಖ ಸಾಮ್ರಾಜ್ಯಗಳ ಗಮನಾರ್ಹ ಕೊಡುಗೆಗಳನ್ನು ಪಟ್ಟಿ ಮಾಡುವರು.

ಚಟುವಟಿಕೆ 1: ಕರ್ನಾಟಕದ ವಿವಿಧ ರಾಜವಂಶಗಳಿಗೆ ಸಂಬಂಧಿಸಿದ ನಾಣ್ಯಗಳ ವಿಶೇಷತೆಯನ್ನು ಪಟ್ಟಿ ಮಾಡಿರಿ.

ರಾಜವಂಶ	ನಾಣ್ಯದಲ್ಲಿ ಗಮನಿಸಿದ ಅಂಶಗಳು/ವಿಶೇಷತೆ
ಶಾತವಾಹನರು	
ಕದಂಬರು	
ಗಂಗರು	
ಬಾದಾಮಿ ಚಾಲುಕ್ಯರು	
ರಾಷ್ಟ್ರಕೂಟರು	

@KTBS NOT TO BE REPUBLISHED

ಚಟುವಟಿಕೆ 2: ಕರ್ನಾಟಕವನ್ನು ಆಳಿದ ರಾಜಮನೆತನಗಳ ಕಾಲದ ಸಾಮಾಜಿಕ ಜೀವನದ ಬಗ್ಗೆ ಎರಡು ವಾಕ್ಯಗಳನ್ನು ಬರೆಯಿರಿ.

ರಾಜ ಮನೆತನ	ಸಾಮಾಜಿಕ ಜೀವನ
ಕದಂಬರು	
ಗಂಗರು	
ಬಾದಾಮಿ ಚಾಲುಕ್ಯರು	

ರಾಷ್ಟ್ರಕೂಟರು	
ಹೊಯ್ಸಳರು	
ಮೈಸೂರಿನ ಒಡೆಯರು	

ಚಟುವಟಿಕೆ 3: ಶಿಕ್ಷಕರ ಸಹಾಯದಿಂದ ಈ ಕೆಳಕಂಡ ಯಾವುದಾದರು ಮೂರು ಪರಿಕಲ್ಪನೆಗಳಿಗೆ ಭಿತ್ತಿ ಪತ್ರಗಳನ್ನು ರಚಿಸಿರಿ.

1) ಜಮೀನ್ದಾರಿ ಪದ್ಧತಿ ನಿರ್ಮೂಲನೆ

2) 1974 ರ ಭೂಸುಧಾರಣಾ ಕಾಯ್ದೆ

3) ಗೇಣಿಪದ್ಧತಿಯಲ್ಲಿ ಸುಧಾರಣೆ

4) ಗರಿಷ್ಟ ಹಿಡುವಳಿ ಮಿತಿ

5) ಆರ್ಥಿಕ ಹಿಡುವಳಿ ರಚನೆ

6) ಸಹಕಾರಿ ಬೇಸಾಯ ಪದ್ಧತಿ

@KTBS NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–23
ಪ್ರಗತಿಯತ್ತ ಭಾರತ

Q4Q6C7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಓದುವಿಕೆ ಮತ್ತು ಸಂವಹನದ ಮೂಲಕ ಅವನು /ಅವಳು ಊಹಿಸಿದ ವಿಚಾರಗಳನ್ನು ಅವನು/ ಅವಳು ವೈಯಕ್ತಿಕ ಅನುಭವಗಳೊಂದಿಗೆ ಸಂಬಂಧಿಕರಿಸುವರು.

ಚಟುವಟಿಕೆ 1: ಈ ಕೆಳಗೆ ನೀಡಿರುವ ಸುದ್ದಿಯನ್ನು ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರ ಮಾಡುವಂತೆ ಗಟ್ಟಿಯಾಗಿ ನಿರರ್ಗಳವಾಗಿ ಸ್ಪಷ್ಟವಾಗಿ ಓದಿರಿ.

ಆಸ್ಟ್ರೇಲಿಯಾಗೆ ತಿರುಗೇಟು | ಕೊಹ್ಲಿ ಪಡೆಗೆ ಟಿ20 ಸರಣಿ | ಏಕದಿನ ಸರಣಿ ಸೋಲಿಗೆ ಪ್ರತೀಕಾರ

ಸಿಡ್ನಿಯಲ್ಲಿ ಪಾಂಡ್ಯ ಸಿಡಿಲು ಭಾರತ ಜಯಭೇರಿ

ಸಿಡ್ನಿ: ಏಕದಿನ ಸರಣಿಯಲ್ಲಿ ಅನುಭವಿಸಿದ ಸೋಲಿಗೆ ಸಾಕಷ್ಟು ಟೀಕೆಗೆ ಗುರಿಯಾಗಿದ್ದ ಭಾರತ ತಂಡ ಸಿಡ್ನಿ ಅಂಗಳದಲ್ಲೇ ಚುಟುಕು ಕ್ರಿಕೆಟ್ ಜಯಿಸಲು ಯಶಸ್ವಿಯಾಗಿದೆ. ಆತಿಥೇಯ ಆಸ್ಟ್ರೇಲಿಯಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳಿಂದ ಜಯ ದಾಖಲಿಸಿದೆ. ಇದರೊಂದಿಗೆ 3 ಪಂದ್ಯಗಳ ಸರಣಿಯಲ್ಲಿ 2-0ಯಿಂದ ಮುನ್ನಡೆ ಸಾಧಿಸಿ, ಸಿಡ್ನಿ ಮೈದಾನದಲ್ಲಿ ಅನುಭವಿಸಿದ ಏಕದಿನ ಸರಣಿ ಸೋಲಿಗೆ ಟಿ20 ಕ್ರಿಕೆಟ್ ಸರಣಿ ಜಯಿಸುವ ಮೂಲಕ ವಿರಾಟ್ ಕೊಹ್ಲಿ ಬಳಗ ನೇರವು ತೀರಿಸಿಕೊಂಡಿತು. ಅನುಭವಿ ಎಡಗೈ ಶಿಖರ್ ಧವನ್ (52ರನ್, 36 ಎಸೆತ, 4 ಬೌಂಡರಿ, 2 ಸಿಕ್ಸರ್) ಹಾಗೂ ಹಾರ್ದಿಕ್ ಪಾಂಡ್ಯ (42*ರನ್, 22 ಎಸೆತ, 3 ಬೌಂಡರಿ, 2 ಸಿಕ್ಸರ್) ಜೋಡಿಯ ಸ್ಫೋಟಕ ಬ್ಯಾಟಿಂಗ್ ನಡೆಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡ, ನಾಯಕ ಮ್ಯಾಥ್ಯೂ ವೇಡ್ (58ರನ್, 32 ಎಸೆತ, 10 ಬೌಂಡರಿ, 1 ಸಿಕ್ಸರ್) ಹಾಗೂ ಸ್ಟೀವನ್ ಸ್ಮಿತ್ (46ರನ್, 38 ಎಸೆತ, 3 ಬೌಂಡರಿ, 2 ಸಿಕ್ಸರ್) ಜೋಡಿಯ ಅಬ್ಬರದ ಬ್ಯಾಟಿಂಗ್ ನೆರವಿನಿಂದ 5 ವಿಕೆಟ್‌ಗೆ 194 ರನ್ ಕಲೆಹಾಕಿತು. ಪ್ರತಿಯಾಗಿ ಭಾರತ ತಂಡ, ನಂಥಟಿತ ಬ್ಯಾಟಿಂಗ್ ಹೋರಾಟದ ಫಲವಾಗಿ 19.4 ಓವರ್‌ಗಳಲ್ಲಿ 4 ವಿಕೆಟ್‌ಗೆ 195 ರನ್ ಗಳಿಸಿ ಜಯದ ನಗೆ ಬೀರಿತು.



ಶ್ರೇಯಸ್ - ಪಾಂಡ್ಯ

ರೋಹಿತ್ ಕರ್ಮ, ಜಸ್‌ಪ್ರೀತ್ ಬುಮ್ರಾರಂಥ ಅನುಭವಿ ಆಟಗಾರರ ಅನುಪಸ್ಥಿತಿ ನಡುವೆಯೂ ಸರಣಿ ಜಯಿಸಿರುವುದು ಹೆಮ್ಮೆಯ ಸಂಗತಿ. ಪಾಂಡ್ಯ ಹೋರಾಟ ಅದ್ಭುತವಾಗಿತ್ತು. ತಂಡದ ಸಂಘಟಿತ ಹೋರಾಟಕ್ಕೆ ಸಿಕ್ಕಿದ ಜಯ ಇದಾಗಿದೆ.

| ವಿರಾಟ್ ಕೊಹ್ಲಿ ಭಾರತ ತಂಡದ ನಾಯಕ

10 ಭಾರತ ತಂಡ, ಟಿ20 ಕ್ರಿಕೆಟ್‌ನಲ್ಲಿ ತವರಿನ ಹೊರಗೆ ಸತತ 10ನೇ ಜಯ ದಾಖಲಿಸಿತು. ವೆಸ್ಟ್ ಇಂಡೀಸ್‌ನಲ್ಲಿ 3, ನ್ಯೂಜಿಲೆಂಡ್‌ನಲ್ಲಿ 5 ಹಾಗೂ ಆಸ್ಟ್ರೇಲಿಯಾ ನೆಲದಲ್ಲಿ 2 ಗೆಲುವು ಸಾಧಿಸಿದೆ.

11 ಭಾರತ ತಂಡ, ಟಿ20 ಕ್ರಿಕೆಟ್‌ನಲ್ಲಿ ಸತತ 11ನೇ ಪಂದ್ಯದಲ್ಲಿ ಆಡಿಯು ಸಾಧನೆ ಮಾಡಿತು. ಇದರಲ್ಲಿ 10ರಲ್ಲಿ ಗೆಲುವು ಸಾಧಿಸಿದರೆ, 1 ಪಂದ್ಯ ರದ್ದುಗೊಂಡಿದೆ.

ವಿರಾಟ್ ಕೊಹ್ಲಿ, ಆಸ್ಟ್ರೇಲಿಯಾ ನೆಲದಲ್ಲಿ 3 ಮಾದರಿಯಲ್ಲೂ ಸರಣಿ ಜಯಿಸಿದ ವಿಶ್ವಾದ ಏಕೈಕ ನಾಯಕ ಎನಿಸಿಕೊಂಡರು.

ಮ್ಯಾಥ್ಯೂ ವೇಡ್-ಸ್ಮಿತ್ ಅಬ್ಬರ

ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡಕ್ಕೆ ನಾಯಕ ಮ್ಯಾಥ್ಯೂ ವೇಡ್ ಸ್ಫೋಟಕ ಬ್ಯಾಟಿಂಗ್ ಮೂಲಕ ಉತ್ತಮ ಆರಂಭ ನೀಡಿದರು. ಡಾರ್ಸಿ ಶಾರ್ಟ್ (9) ವೈಫಲ್ಯ ಅನುಭವಿಸಿದರು. ವೇಡ್ ಅಬ್ಬರದ ನಡುವೆಯೂ ಟಿ.ನಟರಾಜನ್ ಶಾರ್ಟ್ ವಿಕೆಟ್ ಕಬಳಿಸಿದರು.



ನಟರಾಜನ್

ನಟರಾಜನ್ ಎಸೆತವನ್ನು ಸಿಕ್ಸರ್‌ಗೆ ಅಟ್ಟಲು ಯತ್ನಿಸಿದ ವೇಡ್, ಬೌಂಡರಿ ಲೈನ್‌ನಲ್ಲಿದ್ದ ಕ್ರೇಯಸ್ ಅಯ್ಯರ್ ಹಿಡಿದ ಅದ್ಭುತ ಕ್ಯಾಚ್‌ಗೆ ಬಲಿಯಾದರು. ನಂತರ ಸ್ಫೋಟಕ ಬ್ಯಾಟಿಂಗ್‌ಗೆ ಮತ್ತಷ್ಟು ಚುರುಕು ಮುಟ್ಟಿಸಿದ ವೇಡ್, ಸ್ಮಿತ್ ಜತೆಗೆ ಉಂಟಾದ ಗೊಂದಲದಿಂದಾಗಿ ರನೌಟ್ ಬಲೆಗೆ ಬಿದ್ದರು. 75 ರನ್‌ಗಳಿಗೆ ಆಸೀಸ್ 2 ವಿಕೆಟ್ ಕೈಚೆಲ್ಲಿತು. ಬಳಿಕ ಸ್ಟೀವನ್ ಸ್ಮಿತ್, ಗ್ಲೇನ್ ಮ್ಯಾಕ್ಸ್‌ವೆಲ್ (22ರನ್, 13ಎಸೆತ, 2 ಸಿಕ್ಸರ್), ಮೊಯ್ಸೆಸ್ ಹೆನ್ರಿಕ್ಸ್ (26ರನ್, 18 ಎಸೆತ, 1 ಸಿಕ್ಸರ್) ತ್ರಿಮತಿರ್ಣಗಳ ಸ್ಫೋಟಕ ಬ್ಯಾಟಿಂಗ್ ಫಲವಾಗಿ ಆಸ್ಟ್ರೇಲಿಯಾ ತಂಡ ಉತ್ತಮ ಮೊತ್ತ ಪೇರಿಸಿತು. ಕಡೇ ಓವರ್‌ನಲ್ಲಿ ಮಾರ್ಕಸ್ ಸ್ಟೋಯಿನಿಸ್ (16*ರನ್) ಹಾಗೂ ಡೇನಿಯಲ್ ಸ್ಯಾಮ್ಸ್ ತಂಡದ ಮೊತ್ತವನ್ನು 190ರ ಗಡಿ ದಾಟಿಸಿದರು.

ಆಸ್ಟ್ರೇಲಿಯಾ: 5 ವಿಕೆಟ್‌ಗೆ 194

ಮ್ಯಾಥ್ಯೂ ವೇಡ್ ರನೌಟ್ (ಕೊಹ್ಲಿ/ರಾಹುಲ್)	58
ಡಾರ್ಸಿ ಶಾರ್ಟ್ ಸಿ ಕ್ರೀಯಸ್ ಬಿ ಟಿ.ನಟರಾಜನ್	9
ಸ್ಟೀವನ್ ಸ್ಮಿತ್ ಸಿ ಪಾಂಡ್ಯ ಬಿ ಚಾಹಲ್	46
ಮ್ಯಾಕ್ಸ್‌ವೆಲ್ ಸಿ ಸುಂದರ್ ಬಿ ಶಾರ್ದೂಲ್	22
ಹೆನ್ರಿಕ್ಸ್ ಸಿ ರಾಹುಲ್ ಬಿ ಟಿ.ನಟರಾಜನ್	26
ಮಾರ್ಕಸ್ ಸ್ಟೋಯಿನಿಸ್ ಔಟಾಗದೆ	16
ಡೇನಿಯಲ್ ಸ್ಯಾಮ್ಸ್ ಔಟಾಗದೆ	8

ಇತರ: 9, ವಿಕೆಟ್ ಪತನ: 1-47, 2-75, 3-120, 4-168, 5-171. ಬೌಲಿಂಗ್: ದೀಪಕ್ ಚಹರ್ 4-0-48-0, ವಾಷಿಂಗ್ಟನ್ ಸುಂದರ್ 4-0-35-0, ಶಾರ್ದೂಲ್ ಠಾಕೂರ್ 4-0-39-1, ಟಿ. ನಟರಾಜನ್ 4-0-20-2, ಚಾಹಲ್ 4-0-51-1.

ಭಾರತ: 19.4 ಓವರ್‌ಗಳಲ್ಲಿ 4 ವಿಕೆಟ್‌ಗೆ 195

ಕೆಎಲ್ ರಾಹುಲ್ ಸಿ ಸ್ಟಿವ್‌ನನ್ ಬಿ ಟೈ	30
ಶಿಖರ್ ಧವನ್ ಸಿ ಸ್ಟಿವ್‌ನನ್ ಬಿ ಜಂಪಾ	52
ವಿರಾಟ್ ಕೊಹ್ಲಿ ಬಿ ವೇಡ್ ಬಿ ಸ್ಯಾಮ್ಸ್	40
ಸ್ಯಾಮ್ಸನ್ ಸಿ ಸ್ಮಿತ್ ಬಿ ಸ್ಟಿವ್‌ನನ್	15
ಹಾರ್ದಿಕ್ ಪಾಂಡ್ಯ ಅಜೇಯ	42
ಕ್ರೇಯಸ್ ಅಯ್ಯರ್ ಔಟಾಗದೆ	12

ಇತರ: 4. ವಿಕೆಟ್ ಪತನ: 1-56, 2-95, 3-120 4-149. ಬೌಲಿಂಗ್: ಡೇನಿಯಲ್ ಸ್ಯಾಮ್ಸ್ 3.4-0-41-1, ಸೀನ್ ಆಬೋಟ್ 2-0-17-0, ಆಂಡ್ರ್ಯೂ ಟೈ 4-0-47-1, ಗ್ಲೇನ್ ಮ್ಯಾಕ್ಸ್‌ವೆಲ್ 1-0-19-0, ಮಿಚೆಲ್ ಸ್ವಿಪ್‌ಸನ್ 4-0-25-1, ಮೋಯ್ಸೆಸ್ ಹೆನ್ರಿಕ್ಸ್ 1-0-9-0, ಆಡಂ ಜಂಪಾ 4-0-36-1

ಪಂದ್ಯ ಶ್ರೇಷ್ಠ: ಹಾರ್ದಿಕ್ ಪಾಂಡ್ಯ

ಮೂರನೇ ಟಿ20 ಪಂದ್ಯ

- ಯಾವಾಗ: ಡಿಸೆಂಬರ್ 8, ಮಂಗಳವಾರ
- ಎಲ್ಲಿ: ಸಿಡ್ನಿ ಆರಂಭ: ಮಧ್ಯಾಹ್ನ 1.40

ಕೊಹ್ಲಿ ಕ್ಯಾಚ್ ಬಿಟ್ಟರೂ ವೇಡ್ ರನ್‌ಔಟ್..!

ಬೌಲಿಂಗ್‌ಗೆ ಹೆಸರಾಗಿರುವ ವಿರಾಟ್ ಕೊಹ್ಲಿ ಸತತ 2ನೇ ಪಂದ್ಯದಲ್ಲೂ ಕ್ಯಾಚ್ ಕೈಚೆಲ್ಲಿದರು. ಕವರ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಕೊಹ್ಲಿ, ವಾಷಿಂಗ್ಟನ್ ಸುಂದರ್ ಎಸೆತದಲ್ಲಿ ಮ್ಯಾಥ್ಯೂ ವೇಡ್ ನೀಡಿದ ಸುಲಭ ಕ್ಯಾಚ್ ಕೈಚೆಲ್ಲಿದರು. ಆದರೆ, ವೇಡ್ ಆವರನ್ನು ಕೊಹ್ಲಿ ರನೌಟ್ ಮಾಡುವಲ್ಲಿ ಯಶಸ್ವಿ ಕಂಡರು. ಕೊಹ್ಲಿ ಕ್ಯಾಚ್ ಬಿಟ್ಟ ತಕ್ಷಣಕೇ ರನ್ ಕಸಿಯಲು ವೇಡ್ ಯತ್ನಿಸಿದರು. ಆದರೆ, ಮತ್ತೊಂದು ತುದಿಯಲ್ಲಿದ್ದ ಸ್ಮಿತ್ ಜತೆಗೆ ಉಂಟಾದ ಸಂವಹನ ಕೊರತೆಯಿಂದ ವಾಪಸ್ ಕ್ರೀಸ್‌ಗೆ ಬರುವಷ್ಟರಲ್ಲಿ ವೇಡ್ ಆವರನ್ನು ವಿಕೆಟ್ ಕೀಪರ್ ರಾಹುಲ್ ರನೌಟ್ ಮಾಡಿದರು.

7 ಭಾರತದ ಕಡೇ 7 ಟಿ20 ಸರಣಿಗಳ ಪೈಕಿ 6ನೇ ಗೆಲುವು ಇದಾಗಿದ್ದು, ಒಂದು ಸರಣಿ (1-1) ಡ್ರಾಗೊಂಡಿತು.

59 ಯಜುವೇಂದ್ರ ಚಾಹಲ್, ಟಿ20 ಕ್ರಿಕೆಟ್‌ನಲ್ಲಿ ಅತಿಹೆಚ್ಚು ವಿಕೆಟ್ ಕಬಳಿಸಿದ ಬೌಲರ್‌ಗಳ ಪೈಕಿ ಜಸ್‌ಪ್ರೀತ್ ಬುಮ್ರಾ ಜತೆ ಅಗ್ರಸ್ಥಾನ ಹಂಚಿಕೊಂಡರು.

ರಾಹುಲ್-ಧವನ್ ಉತ್ತಮ ಆರಂಭ

ಆಸ್ಟ್ರೇಲಿಯಾ ನೀಡಿದ ಬೃಹತ್ ಮೊತ್ತ ಬೆನ್ನಟ್ಟಿದ ಭಾರತ ತಂಡಕ್ಕೆ ಆರಂಭಿಕ ಹಂತದಲ್ಲಿ ಕನ್ನಡಿಗ ಕೆಎಲ್ ರಾಹುಲ್ (30ರನ್, 22 ಎಸೆತ, 2 ಬೌಂಡರಿ, 1 ಸಿಕ್ಸರ್) ಬಿರುಸಿನ ಬ್ಯಾಟಿಂಗ್ ಮೂಲಕ ಉತ್ತಮ ಆರಂಭ ನೀಡಿದರು. ಅನುಭವಿ ಶಿಖರ್ ಧವನ್ ಮಂದಗತಿಯಲ್ಲೇ ರನ್ ಕಲೆಹಾಕುತ್ತಿದ್ದರೆ ರಾಹುಲ್ ಬಿರುಸಿನ ಬ್ಯಾಟಿಂಗ್ ಮೂಲಕ ಗಮನಸೆಳೆದರು. ಆಂಡ್ರ್ಯೂ ಟೈ ಎಸೆತವನ್ನು ರಕ್ಷಣಾತ್ಮಕವಾಗಿ ಆಡಲು ಯತ್ನಿಸಿದ ರಾಹುಲ್, ಡೀಪ್ ಪಾಯಿಂಟ್‌ನಲ್ಲಿದ್ದ ಮಿಚೆಲ್ ಸ್ವಿಪ್‌ಸನ್‌ಗೆ ಕ್ಯಾಚ್ ನೀಡಿದರು. ಮೊದಲ ವಿಕೆಟ್ ಈ ಜೋಡಿ 32 ಎಸೆತಗಳಲ್ಲಿ 56 ರನ್ ಕಲೆಹಾಕಿ ಭದ್ರ ಬುನಾದಿ ಹಾಕಿಕೊಟ್ಟಿತು. ಬಳಿಕ ಧವನ್ ಜತೆಯಾದ ನಾಯಕ ವಿರಾಟ್ ಕೊಹ್ಲಿ (40ರನ್, 24 ಎಸೆತ, 2 ಬೌಂಡರಿ, 2 ಸಿಕ್ಸರ್) ಜೋಡಿ ತಂಡದ ಮೊತ್ತ ಹಿಗ್ಗಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಅರ್ಧಶತಕ ಪೂರೈಸಿದ ಬೆನ್ನಲ್ಲೇ ಧವನ್, ಸ್ಪಿನ್ನರ್ ಆಡಂ ಜಂಪಾಗೆ ವಿಕೆಟ್ ನೀಡಿದರು. ಬಳಿಕ ಬಂದ ಸಂಜು ಸ್ಯಾಮ್ಸನ್ (15) ಕೆಲಕಾಲ ಅಬ್ಬರಿಸಿ ವಾಪಸಾದರು. ತಂಡ ಉತ್ತಮ ಸ್ಥಿತಿಯಲ್ಲಿ ಇರುವ ವೇಳೆಯಲ್ಲೇ ಕೊಹ್ಲಿ ಕೂಡ ಡೇನಿಯಲ್ ಸ್ಯಾಮ್ಸ್‌ಗೆ ವಿಕೆಟ್ ಒಪ್ಪಿಸಿದರು.

ಪಾಂಡ್ಯ ಅಬ್ಬರಕ್ಕೆ ಕ್ರೇಯಸ್ ಸಾಥ್

ಕೊಹ್ಲಿ ಔಟಾದ ಬಳಿಕ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರು. ಮತ್ತೊಂದು ತುದಿಯಲ್ಲಿ ಕ್ರೀಸಿನ ಅಯ್ಯರ್ ಕೂಡ ಪಾಂಡ್ಯಗೆ ಅನತ್ಯ ಸಾಥ್ ನೀಡಿದರು. ಕಡೇ 3 ಓವರ್‌ಗಳಲ್ಲಿ ಟೀಮ್ ಇಂಡಿಯಾ ಜಯ ದಾಖಲಿಸಲು 37 ರನ್‌ಗಳ ಅವಶ್ಯಕತೆ ಇತ್ತು. ಈ ಹಂತದಲ್ಲಿ ಹಾರ್ದಿಕ್ ಪಾಂಡ್ಯ ಹಾಗೂ ಕ್ರೇಯಸ್ ಅಯ್ಯರ್ (12*ರನ್, 5 ಎಸೆತ, 1 ಬೌಂಡರಿ, 1 ಸಿಕ್ಸರ್) ಜೋಡಿ ಎದುರಿಸಿದ 23 ಎಸೆತಗಳಲ್ಲಿ 46 ರನ್ ಪೇರಿಸಿ ಇನ್ನು 2 ಎಸೆತಗಳು ಬಾಕಿ ಇರುವಂತೆ ತಂಡವನ್ನು ಗೆಲುವಿನ ದಡಕ್ಕೆ ಸೇರಿಸಿತು. ಭಾರತದ ಗೆಲುವಿಗೆ ಕಡೇ ಓವರ್‌ನಲ್ಲಿ 14 ರನ್ ಅವಶ್ಯಕತೆ ಇದ್ದಾಗ, ಡೇನಿಯಲ್ ಸ್ಯಾಮ್ಸ್ ಎಸೆದ ಓವರ್‌ನ ಮೊದಲ ಎಸೆತದಲ್ಲಿ 2 ರನ್ ಕಸಿದ ಪಾಂಡ್ಯ, 2ನೇ ಹಾಗೂ 4ನೇ ಎಸೆತದಲ್ಲಿ ಸಿಕ್ಸರ್ ಸಿಡಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.



1606 ಶಿಖರ್ ಧವನ್, ಟಿ20 ಕ್ರಿಕೆಟ್‌ನಲ್ಲಿ ಅತಿಹೆಚ್ಚು ರನ್‌ಗಳಿಸಿದ ಭಾರತದ ಎಡಗೈ ಬ್ಯಾಟ್ಸ್‌ಮನ್ ಎನಿಸಿಕೊಂಡರು. ಸುರೇಶ್ ರೈನಾ (1605) ಹೆಸರಿನಲ್ಲಿ ದಾಖಲೆಯೆನ್ನು ಹಿಂದಿಕ್ಕಿದರು.



ಅಜಿಂಕ್ಯ ರಹಾನೆ

ಅಜಿಂಕ್ಯ ರಹಾನೆ ಶತಕದ ಅಭ್ಯಾಸ

ಸಿಡ್ನಿ: ಆಸ್ಟ್ರೇಲಿಯಾ ಎ ವಿರುದ್ಧದ ತ್ರಿದಿನ ಅಭ್ಯಾಸ ಪಂದ್ಯದಲ್ಲೂ ನಾಯಕ ಅಜಿಂಕ್ಯ ರಹಾನೆ (108*ರನ್, 228 ಎಸೆತ, 16 ಬೌಂಡರಿ, 1 ಸಿಕ್ಸರ್) ಶತಕ, ಚೇತೇಶ್ವರ ಪೂಜಾರ (54 ರನ್, 140 ಎಸೆತ, 5 ಬೌಂಡರಿ) ಅರ್ಧ ಶತಕದ ಆಟದೊಂದಿಗೆ ಭಾರತ ಭರವಸೆ ಹೆಚ್ಚಿಸಿಕೊಂಡಿದೆ.

ಡ್ರಮ್ಮೊಯ್ನೆ ಓವೆಲ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಭಾರತ ತಂಡ ಮೊದಲ ದಿನದಾಟದ ಅಂತ್ಯಕ್ಕೆ 8 ವಿಕೆಟ್‌ಗೆ 237 ರನ್ ಪೇರಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತದ ಪರ ಯುವ ಆರಂಭಿಕರಾದ ಪೃಥ್ವಿ ಷಾ, ಶುಭಮಾನ್ ಗಿಲ್ ಇಬ್ಬರೂ ಖಾತೆ ತೆರೆಯಲು ವಿಫಲರಾದರು. ಬಳಿಕ ಹನುಮ ವಿಹಾರಿ (15), ವೃದ್ಧಿಮಾನ್ ಸಾಹ (0), ಆಶ್ವಿನ್ (5) ಕೂಡ ನಿರಾಸೆ ಅನುಭವಿಸಿದರು. ಆದರೆ, ಪೂಜಾರ (4ನೇ ವಿಕೆಟ್‌ಗೆ 76 ರನ್), ಕುಲ್‌ದೀಪ್ ಯಾದವ್ (7ನೇ ವಿಕೆಟ್‌ಗೆ 69 ರನ್), ಉಮೇಶ್ ಯಾದವ್ (8ನೇ ವಿಕೆಟ್‌ಗೆ ಮುರಿಯದ 38 ರನ್) ಜೊತೆ ಉಪಯುಕ್ತ ಜೊತೆಯಾಟ ಕಟ್ಟಿದ ರಹಾನೆ ದಿನದಂತ್ಯಕ್ಕೆ ಅಜೇಯರಾಗಿಗಿದರಲ್ಲದೆ ಭಾರತ ತಂಡ ಅಲೌಟ್ ಆಗದಂತೆ ನೋಡಿಕೊಂಡರು.

ಭಾರತ ಎ ತಂಡ: 8 ವಿಕೆಟ್‌ಗೆ 237 (ಅಜಿಂಕ್ಯ ರಹಾನೆ 108*, ಚೇತೇಶ್ವರ ಪೂಜಾರ 54, ಉಮೇಶ್ ಯಾದವ್ 24, ಕುಲ್‌ದೀಪ್ 15, ಪ್ಯಾಟಿನ್‌ಸನ್ 58ಕ್ಕೆ 3, ಮೈಚೆಲ್ ನೆಸೆರ್ 51ಕ್ಕೆ 2, ಟ್ರಾವಿಸ್ ಹೆಡ್ 24ಕ್ಕೆ 2).

© NCERT NOT TO BE REPUBLISHED

ಚಟುವಟಿಕೆ 2: ಕೆಳಗೆ ನೀಡಿರುವ ಗೃಹ ಕೈಗಾರಿಕೆ ಚಿತ್ರಗಳ ಹೆಸರು ಬರೆದು, ನಿಮ್ಮ ಶಿಕ್ಷಕರ / ಪೋಷಕರ ಸಹಾಯದಿಂದ ಅವುಗಳನ್ನು ತಯಾರಿಸುವ ವಿಧಾನವನ್ನು ಬರೆಯಿರಿ.

ಚಿತ್ರಗಳು	ಮಾಡುವ/ತಯಾರಿಸುವ ವಿಧಾನ
	
	

©KTBS NOT TO BE REPUBLISHED

ಚಟುವಟಿಕೆ 3: ನೀವು ನೋಡಿದ ಕನ್ನಡ ಟಿ.ವಿ ಕಾರ್ಯಕ್ರಮದಲ್ಲಿ ನಿಮಗೆ ಇಷ್ಟವಾದ ಉತ್ತಮ ನಿರೂಪಕರ ನಿರೂಪಣೆಯನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

ಚಟುವಟಿಕೆ 4: ನೀವು ಭೇಟಿ ನೀಡಿದ ಮಾರುಕಟ್ಟೆ ಅಥವಾ ಸಂತೆಯಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಿ ನಿಮ್ಮ ಅಭಿಪ್ರಾಯ ಬರೆಯಿರಿ.

ಗಮನಿಸಬೇಕಾದ ಅಂಶಗಳು	ಅಭಿಪ್ರಾಯಗಳು
1. ವ್ಯಾಪಾರ	
2. ವಸ್ತುಗಳು	
3. ಜನರ ವ್ಯವಹಾರ	
4. ಇಷ್ಟವಾದ ಅಂಶಗಳು	
5. ಬಯಸುವ ಬದಲಾವಣೆ	

©KTBS NOT TO BE REPUBLISHED

ಚಟುವಟಿಕೆ 5: ಭಾರತವು ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸುತ್ತಿದ್ದು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ಪಟ್ಟಿಮಾಡಿ, ಚೀಟಿಯಲ್ಲಿ ಬರೆದು ಆಶು–ಭಾಷಣ ಚಟುವಟಿಕೆಯನ್ನು ತರಗತಿಯಲ್ಲಿ ಮಂಡಿಸಿರಿ.

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–24
ಶಾಂತಿದೂತ ಭಾರತ

Z5U6J6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಸಮಾನತೆ, ಶಾಂತಿ ಮುಂತಾದವುಗಳ ಕುರಿತು ಬರೆಯುವರು ಹಾಗೂ ಮಾತನಾಡುವುದರ ಜೊತೆಗೆ ವೈಯಕ್ತಿಕ ಅಭಿಪ್ರಾಯ ತಿಳಿಸುವರು.

ಚಟುವಟಿಕೆ 1:







ಮೇಲಿನ ಚಿತ್ರಗಳನ್ನು ವೀಕ್ಷಿಸಿ ಅವುಗಳು ಏನನ್ನು ಬಿಂಬಿಸುತ್ತವೆ? ಎಂಬುದನ್ನು ಗುಂಪಿನಲ್ಲಿ ಚರ್ಚಿಸಿರಿ. ಪ್ರಮುಖ ಅಂಶಗಳನ್ನು ಬರೆಯಿರಿ.

ಚಟುವಟಿಕೆ 2: ಭಾರತದ ಪ್ರಧಾನ ಮಂತ್ರಿಯವರು ಹಾಗೂ ಅಮೆರಿಕಾದ ಅಧ್ಯಕ್ಷರ ನಡುವೆ ಶಾಂತಿಗಾಗಿ ನಡೆಸುವ ಈ ಕೆಳಗಿನ ಸಂಭಾಷಣೆಯನ್ನು ನಿಮ್ಮ ಮಾತಿನಲ್ಲಿ ಸ್ನೇಹಿತರೊಂದಿಗೆ ತರಗತಿಯಲ್ಲಿ ಪ್ರಸ್ತುತ ಪಡಿಸಿರಿ.

ಭಾರತದ ಪ್ರಧಾನಿಯವರು: ಭಾರತ ಸುಸಂಸ್ಕೃತವಾದ ದೇಶ ಹಾಗೂ ಶಾಂತಿ ಪ್ರಿಯವಾದ ರಾಷ್ಟ್ರ.

ಅಮೆರಿಕಾದ ಅಧ್ಯಕ್ಷರು: ಅಮೆರಿಕ ವಾಣಿಜ್ಯ ಕ್ಷೇತ್ರದಲ್ಲಿ ಮುಂದುವರಿದ ದೇಶ.

ಭಾರತದ ಪ್ರಧಾನ ಮಂತ್ರಿಯವರು: ವಾಣಿಜ್ಯ ಪ್ರಕ್ರಿಯೆಯಲ್ಲಿ ಭಾರತವನ್ನು ತೊಡಗಿಸಿಕೊಳ್ಳುತ್ತೇವೆ ಹಾಗೂ ಅದಕ್ಕಾಗಿ ವಾಣಿಜ್ಯ ಒಪ್ಪಂದವನ್ನು ಮಾಡಿಕೊಳ್ಳೋಣವೇ?

ಅಮೆರಿಕಾದ ಅಧ್ಯಕ್ಷರು: ಸರಿ ಎರಡು ದೇಶಗಳ ಅಭಿವೃದ್ಧಿಗಾಗಿ ಒಪ್ಪಂದವನ್ನು ಮಾಡಿಕೊಳ್ಳೋಣ.

ಭಾರತದ ಪ್ರಧಾನ ಮಂತ್ರಿಯವರು: ನಮ್ಮ ದೇಶದಲ್ಲಿ ಸೈನ್ಯಕ್ಕೆ ಬಲವರ್ಧನೆಯನ್ನು ನೀಡಿದ್ದೇವೆ ಹಾಗೂ ಹಲವಾರು ವೈವಿಧ್ಯಮಯವಾದ ನೌಕಾಪಡೆ, ವಾಯುಪಡೆ ಮತ್ತು ಭೂಸೇನೆಗಳನ್ನು ಅಭಿವೃದ್ಧಿಗೊಳಿಸಿದ್ದೇವೆ.

ಅಮೆರಿಕಾದ ಅಧ್ಯಕ್ಷರು: ನಮ್ಮ ದೇಶದಲ್ಲೂ ರಕ್ಷಣಾ ಪಡೆಯನ್ನು ಅಭಿವೃದ್ಧಿಗೊಳಿಸಿದ್ದೇವೆ.

ಭಾರತದ ಪ್ರಧಾನ ಮಂತ್ರಿಯವರು: ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡಿ ಎಲ್ಲರೂ ಸೇರಿ ಶಾಂತಿಯನ್ನು ಕಾಪಾಡೋಣ ಅಭಿವೃದ್ಧಿಯತ್ತ ದಾಪುಗಾಲು ಹಾಕೋಣ.

ಅಮೆರಿಕಾದ ಅಧ್ಯಕ್ಷರು: ಹಾಗೇ ಆಗಲಿ ಶಾಂತಿಯನ್ನು ನೆಲೆಸುವ ಹಾಗೆ ಮಾಡೋಣ.

ಈ ಮೇಲಿನ ಸಂಭಾಷಣೆಯನ್ನು ಕಲ್ಪನೆಯ ತಿರುವುಗಳನ್ನು ನೀಡಿ ಮುಂದುವರಿಸಬಹುದು ಹಾಗೂ ಇದರಿಂದ ನಿಮಗೆ ಅರ್ಥವಾದ ಅಂಶಗಳನ್ನು ಬರೆಯಿರಿ.

@KTBS NOT TO BE REPUBLISHED

ಚಟುವಟಿಕೆ 3: ಭಾರತ ಮತ್ತು ಇತರ ದೇಶದ ಶಾಂತಿಯುತ ಸಂಬಂಧಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸಿ, ಆಲ್ಬಮ್ ತಯಾರಿಸುವಾಗ ನಿಮಗಾದ ಅನುಭವವನ್ನು ಸಂಕ್ಷಿಪ್ತವಾಗಿ ಬರೆಯಿರಿ.


ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–25
ನೆರೆಯ ರಾಷ್ಟ್ರಗಳು

F1L8F1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಭಾರತದ ನೆರೆಯ ದೇಶಗಳ ಬಗ್ಗೆ ತಿಳಿಯುವರು ಅವುಗಳನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳುವರು.

ಚಟುವಟಿಕೆ 1: ಕೊಟ್ಟಿರುವ ಭಾರತ ನಕಾಶೆಯಲ್ಲಿ ನೆರೆಹೊರೆ ದೇಶಗಳನ್ನು ಅವುಗಳ ಸ್ಥಾನದಲ್ಲಿರುವ ಡ್ರಾಪ್ ಬಾಕ್ಸ್‌ನಲ್ಲಿ ಬರೆಯಿರಿ.



ಚಟುವಟಿಕೆ 2: ಕೆಳಗೆ ಕೊಟ್ಟಿರುವ ಭಾರತದ ನೆರೆ ದೇಶಗಳ ರಾಜಧಾನಿಗಳನ್ನು ಬರೆಯಿರಿ.

ದೇಶ	ರಾಜಧಾನಿ
ನೇಪಾಳ	
ಅಫ್ಘಾನಿಸ್ತಾನ	
ಚೀನಾ	
ಪಾಕಿಸ್ತಾನ	
ಬಾಂಗ್ಲಾದೇಶ	
ಮಾಯನ್ಮಾರ್	
ಭೂತಾನ್	
ಶ್ರೀಲಂಕಾ	
ಮಾಲ್ದೀವ್ಸ್	

©KTBS NOT TO BE REPUBLISHED

ಚಟುವಟಿಕೆ 3: ನೆರೆಯ ದೇಶಗಳೊಡನೆ ಒಳ್ಳೆಯ ಸ್ನೇಹ ಸಂಬಂಧ ಏಕೆ ಮುಖ್ಯ? ಎಂಬುದನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–26

ವಿಶ್ವಸಂಸ್ಥೆ

I8R7F5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಸ್ಥಳೀಯವಾಗಿ ಲಭ್ಯವಿರುವ ವಿಭಿನ್ನ ಹಾಗೂ ಅನುಪಯುಕ್ತ ವಸ್ತುಗಳನ್ನು ಬಳಸಿ ಬಿತ್ತಿ ಚಿತ್ರ, ವಿನ್ಯಾಸ ಮಾದರಿಗಳು, ಸ್ಥಳೀಯ ಆಹಾರ, ರೇಖಾಚಿತ್ರ ನಕಾಶೆ (ಭೇಟಿ ನೀಡಿದ ನೆರೆಹೊರೆ ಹಾಗೂ ವಿಭಿನ್ನ ಸ್ಥಳಗಳು) ಘೋಷಣೆಗಳು ಪ್ರವಾಸಿ ಕಥನ ಮುಂತಾದವುಗಳನ್ನು ರಚಿಸುವರು.

ಚಟುವಟಿಕೆ 1: ಗಾಂಧೀಜಿಯವರ ಮೌಲ್ಯಗಳು ಹಾಗೂ ವಿಶ್ವಸಂಸ್ಥೆಯ ಗುರಿಗಳಿಗಿರುವ ಸಾಮ್ಯತೆಯನ್ನು ಬರೆಯಿರಿ.

ಗಾಂಧೀಜಿಯವರ ಮೌಲ್ಯಗಳು	ವಿಶ್ವಸಂಸ್ಥೆಯ ಗುರಿಗಳು

@KTBS NOT TO BE REPUBLISHED

ಚಟುವಟಿಕೆ 2: ಪಕ್ಕದಲ್ಲಿ ನೀಡಿರುವ ವಿಶ್ವಸಂಸ್ಥೆಯ ಲೋಗೋದ ಚಿತ್ರವನ್ನು ನೋಡಿಕೊಂಡು ಡ್ರಾಯಿಂಗ್ ಹಾಳೆಯ ಮೇಲೆ ಕಡಿಮೆ ಬೆಲೆಯುಳ್ಳ ಅಥವಾ ಬೆಲೆ ರಹಿತ ವಸ್ತುಗಳನ್ನು ಬಳಸಿ ಮಾದರಿ ತಯಾರಿಸಿ. (ಎಲೆಗಳು. ಬಣ್ಣದ ಕಾಗದಗಳು ಬೆಂಕಿಕಡ್ಡಿ)



ಚಟುವಟಿಕೆ 3: ಈ ಕೆಳಗೆ ನೀಡಿರುವ ವಿಶ್ವ ಸಂಸ್ಥೆಯ ವಿಶೇಷ ಸೇವಾ ಘಟಕಗಳ ಲೋಗೋಗಳನ್ನು ಹೆಸರಿಸಿರಿ. ಹಾಗೂ ಅವುಗಳ ಪ್ರಾಮುಖ್ಯತೆಯನ್ನು ಒಂದು–ಎರಡು ವಾಕ್ಯಗಳಲ್ಲಿ ಬರೆಯಿರಿ.

1		
2		
3		
4		
5		
6		

@KTBS NOT TO BE REPUBLISHED


ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–27
ಸಮತಟ್ಟಾದ ಭೂಖಂಡ

J3J1G5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ: ಆಸ್ಟ್ರೇಲಿಯಾದ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶಗಳನ್ನು ಗುರುತಿಸುವರು.

ಚಟುವಟಿಕೆ 1: ಪ್ರಂಪಚದ ಭೂಪಟದಲ್ಲಿ ಆಸ್ಟ್ರೇಲಿಯ ಖಂಡವನ್ನು ಗುರುತಿಸಿ ಬಣ್ಣ ತುಂಬಿರಿ ಮತ್ತು ಅದರ ಭೌಗೋಳಿಕ ಸನ್ನಿವೇಶಗಳನ್ನು ಬರೆಯಿರಿ.



@KTBS NOT TO BE REPUBLISHED

ಭೌಗೋಳಿಕ ಸನ್ನಿವೇಶ :

ಚಟುವಟಿಕೆ 2: ಆಸ್ಟ್ರೇಲಿಯ ಖಂಡದ ಪ್ರಮುಖ ಪ್ರಾಣಿ ಮತ್ತು ಸಸ್ಯವರ್ಗಗಳ ಚಿತ್ರಗಳನ್ನು ಸಂಗ್ರಹಿಸಿ ಕೊಲೇಜ್ ಮಾಡಿರಿ.

@KTBS
NOT TO BE REPUBLISHED

ಬೆಂಬಲಿತ ಕಲಿಕಾ ಹಂತ: ಚಟುವಟಿಕೆ ಹಾಳೆ–28
ಸಂಶೋಧನಾ ಖಂಡ

M2P8M4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


ಕಲಿಕಾ ಫಲ: ಅಂಟಾರ್ಟಿಕ ಖಂಡದ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶಗಳನ್ನು ಗುರುತಿಸುವರು.


ಚಟುವಟಿಕೆ 1: ಗ್ಲೋಬ್ ಸಹಾಯದಿಂದ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳನ್ನು ಗುರುತಿಸಿ, ದಕ್ಷಿಣ ಧ್ರುವದ ವಿಶೇಷತೆಗಳನ್ನು ಚರ್ಚಿಸಿ ಬರೆಯಿರಿ.

ಚಟುವಟಿಕೆ 2: ಈ ಕೆಳಗಿನ ಚಿತ್ರಗಳನ್ನು ಗುರುತಿಸಿ ಅವುಗಳ ಹೆಸರುಗಳನ್ನು ಬರೆಯಿರಿ.









@KTBS NOT TO BE REPUBLISHED

ಚಟುವಟಿಕೆ 3: ಕೆಳಗಿನ ಹೇಳಿಕೆಗಳನ್ನು ಓದಿ, ಸತ್ಯ (ಸರಿ) ಅಥವಾ ಕಲ್ಪನೆ (ತಪ್ಪು) ಗುರುತಿಸಿ ಬರೆಯಿರಿ.

1. ಅಂಟಾರ್ಟಿಕ ಖಂಡವು ಉಷ್ಣ ಪ್ರದೇಶವಾಗಿದೆ. ☐

2. ಅಂಟಾರ್ಟಿಕ ಖಂಡದಲ್ಲಿ ಪೆಂಗ್ವಿನ್ ಗಳು ಹೆಚ್ಚಾಗಿ ಕಂಡುಬರುತ್ತವೆ. ☐

3. ಅಂಟಾರ್ಟಿಕ ಖಂಡದಲ್ಲಿ ಜನಸಂಖ್ಯೆ ಬಹಳ ಹೆಚ್ಚಾಗಿದೆ. ☐

4. ಅಂಟಾರ್ಟಿಕ ಖಂಡವು ದಕ್ಷಿಣ ಧ್ರುವದಲ್ಲಿ ನೆಲೆಸಿದೆ. ☐

5. ಅಂಟಾರ್ಟಿಕ ಖಂಡದಲ್ಲಿ ಅರಣ್ಯ ಸಂಪತ್ತು ಹೇರಳವಾಗಿದೆ. ☐

6. ಅಂಟಾರ್ಟಿಕ ಖಂಡವು ಸಂಶೋಧನೆಗೆ ಮಾತ್ರ ಮೀಸಲಾಗಿದೆ. ☐

ಚಟುವಟಿಕೆ 4: ಅಂಟಾರ್ಟಿಕ ಖಂಡದಲ್ಲಿರುವ ಭಾರತೀಯ ಸಂಶೋಧನಾ ಕೇಂದ್ರಗಳ ಕುರಿತು ಬರೆಯಿರಿ.

ದಕ್ಷಿಣ ಗಂಗೋತ್ರಿ: _____

_____

_____

ಮೈತ್ರಿ: _____

_____

_____

ಭಾರತಿ: _____

_____

_____

@KTBS NOT TO BE REPUBLISHED